**ದಿನಾಂಕಃ 22-09-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ ಸಿ ಹೆಚ್ ವಕೀಲರಿಂದಃ**

1. ನಾನು ಕೋಟಿಹಾಳ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ. ನನ್ನ ಮಕ್ಕಳು ಶಿಕಾರಿಪುರ ತಾಲೂಕಿನ ಹೊಸ ನಗರದಲ್ಲಿ ವಾಸಿಸುತ್ತಾರೆ. 4 ನೇ ಅರ್ಜಿದಾರಳು ಹಾನಗಲ್ ತಾಲೂಕಿನ ಎಲಿವಾಳ ಗ್ರಾಮದ ತನ್ನ ಗಂಡನ ಮನೆಯಲ್ಲಿ ವಾಸಿಸುತ್ತಾಳೆ. ನಾನು ಕೋಟಿಹಾಳ ಗ್ರಾಮದಲ್ಲಿ ವಾಸಿಸುತ್ತೇನೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. ನಾನು ಕೋಟಿಹಾಳ ಗ್ರಾಮದಲ್ಲಿ ವಾಸಿಸುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಆಧಾರ ಕಾರ್ಡ ಹಾಗೂ ಪಡಿತರ ಚೀಟಿ ಶಿಕಾರಿಪುರ ತಾಲೂಕಿನಿಂದ ಪಡೆದಿದ್ದೇನೆ.

2. ಮೃತ ಚಂದ್ರಯ್ಯ ನನ್ನ ಗಂಡ. ಆತ ಹೊಸನಗರದಲ್ಲಿ ವಾಸವಾಗಿದ್ದ. ನನ್ನ ಗಂಡ ಹೈನುಗಾರಿಕೆ, ಹೋಟೆಲ್ ಮತ್ತು ವ್ಯವಸಾಯ ಮಾಡುತ್ತಿದ್ದರು. ನನ್ನ ಗಂಡ ಹೈನುಗಾರಿಕೆ, ಹೋಟೆಲ್ ಮತ್ತು ವ್ಯವಸಾಯ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಹೋಟೆಲ್ ಶಿಕಾರಿಪುರ ತಾಲೂಕಿನ ನೆಲವಾಗಿಲು ದೇವಸ್ಥಾನದ ಹತ್ತಿರ ಇತ್ತು. ನಮ್ಮ ಮನೆಯಲ್ಲಿ 2 ಆಕಳು ಇವೆ. ಹಾಲು ಮಾರಾಟ ಮಾಡಿದ ಕುರಿತು ಯಾವುದೇ ದಾಖಲೆ ಇಲ್ಲ. ನನ್ನ ಗಂಡ ಹೈನುಗಾರಿಕೆ ಮಾಡುತ್ತಿದ್ದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಹೋಟೆಲ್ ನಡೆಸುತ್ತಿದ್ದ ಎನ್ನುವ ಕುರಿತು ಯಾವುದೇ ದಾಖಲೆ ಇಲ್ಲ. ನಮಗೆ ಹೊಸನಗರದಲ್ಲಿ ಒಂದು ಎಕರೆ ಕೃಷಿ ಜಮೀನು ಇದೆ. ನಾವು ಸದರಿ ಜಮೀನಿನಲ್ಲಿ ಜೋಳ ಬೆಳೆಯುತ್ತೇವೆ. ಆ ಕುರಿತು ದಾಖಲೆ ಹಾಜರು ಪಡಿಸಿಲ್ಲ.

3. 2 ನೇ ಅರ್ಜಿದಾರ ಈರಯ್ಯ ಐ.ಟಿ ಕಾಲೇಜಿನಲ್ಲಿ ನೌಕರಿ ಮಾಡುತ್ತಾನೆ. ಆತನ ಉದ್ಯೋಗ ಕೂಲಿ ಎಂದು ಸುಳ್ಳು ಬರೆಯಿಸಿದ್ದೇವೆ ಎಂದರೆ ಸರಿಯಲ್ಲ .3 ನೇ ಅರ್ಜಿದಾರ ನಮ್ಮ

ಊರಿನಲ್ಲಿ ಕಿರಾಣಿ ಅಂಗಡಿ ನಡೆಸುತ್ತಾರೆ ಎಂದರೆ ನಿಜ. ಆತನ ಉದ್ಯೋಗವನ್ನು ಸಹ ಕೂಲಿ ಎಂದು ಸುಳ್ಳು ಬರೆಯಿಸಿದ್ದೇವೆ ಎಂದರೆ ಸರಿಯಲ್ಲ . ನನ್ನ ಗಂಡನಿಗೆ ಮಾಸಿಕ ರೂ. 25,000/- ಆದಾಯ ಇತ್ತು. ನನ್ನ ಗಂಡನಿಗೆ ವಾರ್ಷಿಕ 15 ರಿಂದ 20 ಸಾವಿರ ರೂಪಾಯಿ ಮಾತ್ರ ಆದಾಯ ಇತ್ತು ಎಂದರೆ ಸರಿಯಲ್ಲ .

4. ಅಪಘಾತ ನೆಲವಾಗಿಲು ಗ್ರಾಮದ ಹತ್ತಿರ ಆಗಿದೆ. ಅಪಘಾತದ ದಿನ ನನ್ನ ಗಂಡ ನಡೆಯುತ್ತಾ ಬರುತ್ತಿದ್ದ ಆದರೆ ಯಾವ ಕಡೆಯಿಂದ ಬರುತ್ತಿದ್ದ ಎನ್ನುವುದು ಗೊತ್ತಿಲ್ಲ . ಆತ ಒಬ್ಬನೇ ಬರುತ್ತಿದ್ದ. ನನ್ನ ಗಂಡ ರಸ್ತೆಯ ಯಾವ ಭಾಗದಲ್ಲಿ ಹೊರಟಿದ್ದ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಗಂಡ ಆ ದಿನ ಸೈಕಲ್ ಮೇಲೆ ನೆಲವಾಗಿಲು ಪ್ಲಾಟ್ ಕಡೆಯಿಂದ ನಮ್ಮ ಗ್ರಾಮಕ್ಕೆ ಬರುತ್ತಿದ್ದ ಎಂದರೆ ಸರಿಯಲ್ಲ . ಸೈಕಲ್ ಮೇಲೆ ಆತ ಸುಮಾರು 40 ರಿಂದ 50 ಕೆ ಜಿ ತೂಕದ ತೌಡು ತರುತ್ತಿದ್ದ ಎನ್ನುವುದು ನನಗೆ ಗೊತ್ತಿಲ್ಲ. ಅಪಘಾತದ ಸ್ಥಳದಲ್ಲಿ ರಸ್ತೆ ಸುಮಾರು 25 ಅಡಿ ಅಗಲ ಇದೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಗಂಡ ಬ್ಯಾಲೆನ್ಸ ತಪ್ಪಿ ತಾನೇ ಸೈಕಲ್ ನಿಂದ ಬಿದ್ದಿರುತ್ತಾನೆ ಎಂದರೆ ಸರಿಯಲ್ಲ . ನಾನು ಅಪಘಾತ ಸ್ಥಳಕ್ಕೆ ಹೋಗಿಲ್ಲ. ಎದುರುದಾರನ ವಾಹನದ ಚಾಲಕ ಜೋರಾಗಿ ಬಂದು ನನ್ನ ಗಂಡನಿಗೆ ಅಪಘಾತ ಪಡಿಸಿದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬ ಮೃತನ ಆದಾಯದ ಮೇಲೆ ಅವಲಂಬಿತವಾಗಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು 2 ಹಾಗೂ 3 ನೇ ಅರ್ಜಿದಾರರ ಆದಾಯದ ಮೇಲೆ ಅವಲಂಬಿತರಾಗಿದ್ದೆವು ಎನ್ನುವುದು ಸರಿಯಲ್ಲ. ಅಪಘಾತ ಎದುರುದಾರನ ತಪ್ಪಿನಿಂದ ಆಗಿಲ್ಲ ಆದರೆ ನನ್ನ ಗಂಡನ ನಿರ್ಲಕ್ಷತನದಿಂದ ಆಗಿದೆ ಎನ್ನುವುದು ಸರಿಯಲ್ಲ. ಅಪಘಾತದ ಕುರಿತು ನನ್ನ ಮಗ ಸುಳ್ಳು ದೂರು ದಾಖಲಿಸಿದ್ದಾನೆ ಎಂದರೆ ಸರಿಯಲ್ಲ . ಮಾನವೀಯತೆಯ ದೃಷ್ಠಿಯಿಂದ ಎದುರುದಾರ ನಮಗೆ 4 ಲಕ್ಷ 50 ಸಾವಿರ

ರೂಪಾಯಿ ಕೊಡಬೇಕು ಎಂದು ಗ್ರಾಮಸ್ಥರು ತೀರ್ಮಾನಿಸಿದ್ದರು ಎಂದರೆ ಸರಿಯಲ್ಲ. ಆ ಕುರಿತು ದಿಃ 10-12-2020 ರಂದು ನಮ್ಮ ಖಾತೆಗೆ 49 ಸಾವಿರ ರೂಪಾಯಿ ಹಣ ಪಾವತಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಸದರಿ ಹಣವನ್ನು ಸ್ವೀಕರಿಸಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 4 ಲಕ್ಷ 50 ಸಾವಿರ ರೂಪಾಯಿ ಹಣದ ಕುರಿತು ದಿಃ 29-09-2020 ರಂದು ಕರಾರು ಪತ್ರ ಮಾಡಲಾಗಿತ್ತು ಎಂದರೆ ಸರಿಯಲ್ಲ . ಉಳಿದ ಹಣ ಈಗಲೂ ಮಧ್ಯಸ್ಥಗಾರರ ಬಳಿ ಇದೆ ಎಂದರೆ ಸರಿಯಲ್ಲ . ಕರಾರು ಪತ್ರಕ್ಕೆ ನಾನು ಕೂಡ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ .ಶಿಕಾರಿಪುರ ನ್ಯಾಯಾಲಯದಲ್ಲಿರುವ ಕ್ರಿಮಿನಲ್ ಪ್ರಕರಣ ತೀರ್ಮಾನವಾದ ನಂತರ ಸದರಿ ಹಣವನ್ನು ಎದುರುದಾರ ನಮಗೆ ಕೊಡಬೇಕು ಎಂದು ಒಪ್ಪಂದ ಆಗಿತ್ತು ಎಂದರೆ ಸರಿಯಲ್ಲ . ನನಗೆ ಎಲ್ಲಾ ಸತ್ಯ ಸಂಗತಿಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗೆ ನನ್ನ ಮಕ್ಕಳು ಕೂಡ ಸಹಿ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಎದುರುದಾರನಿಂದ 49 ಸಾವಿರ ರೂಪಾಯಿ ಹಣ ಪಡೆದಿದ್ದರೂ ಸಹ ಯಾವುದೇ ಪರಿಹಾರ ಪಡೆದಿಲ್ಲ ಎಂದು ಅರ್ಜಿಯಲ್ಲಿ ಸುಳ್ಳು ನಮೂದಿಸಿದ್ದೇನೆ ಎಂದರೆ ಸರಿಯಲ್ಲ . ಪರಿಹಾರ ಧನ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ದಾಖಲೆ ಹಾಜರು ಪಡಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಅಪಘಾತ ಆಗದೇ ಇರುವುದರಿಂದ ಈ ಪ್ರಕರಣ ನಡೆಸುವ ಅಧಿಕಾರ ನ್ಯಾಯಾಲಯಕ್ಕೆ ಇಲ್ಲ ಎಂದರೆ ಸರಿಯಲ್ಲ .

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.